**ಎಫ್ ಡಿ ಪಿ ನಂ. 9/2025**
**ಆರ್ ಡಬ್ಲ್ಯೂ ಃ 05**

**ದಿಃ 17-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ 11 ನೇ ಎದುರುದಾರರಪರ ಎಂ ಎಸ್ ಬಿ ವಕೀಲರಿಂದಃ**

ನಮ್ಮ ತಂದೆಗೆ ನಾನು ಮಗಳು ಹಾಗೂ 3 ಜನ ತಮ್ಮಂದಿರು. ನನ್ನ ಮದುವೆ ಆಗಿರುತ್ತದೆ. ನನ್ನನ್ನು ಅರೆಬಸನಕೊಪ್ಪ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿರುತ್ತಾರೆ. ನನ್ನ ಗಂಡನ ಮನೆ ಅಡ್ಡ ಹೆಸರು ಕಾಮಧೇನು. ತವರು ಮನೆ ಬೈರಿದೇವರಕೊಪ್ಪ. ಆಧಾರ ಕಾರ್ಡನಲ್ಲಿ ಅರೆಬಸನಕೊಪ್ಪದ ವಿಳಾಸ ಇರುತ್ತದೆ. ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಬೈರಿದೇವರಕೊಪ್ಪದಲ್ಲಿ ವಾಸವಾಗಿದ್ದೇವೆ. ನನ್ನ ಗಂಡ ಅರೆಬಸನಕೊಪ್ಪ ಗ್ರಾಮದಲ್ಲಿ ವ್ಯವಸಾಯ ಮಾಡುತ್ತಾರೆ. ಬೈರಿದೇವರಕೊಪ್ಪದಲ್ಲಿ ಬಾಡಿಗೆ ಮನೆ ಇರುತ್ತದೆ. ಬಾಡಿಗೆ ಮನೆಯಲ್ಲಿ 3 ಜನ ಹೆಣ್ಣು ಮಕ್ಕಳು ಒಬ್ಬ ಗಂಡು ಮಗ ಇರುತ್ತೇವೆ. ನನ್ನ ಗಂಡ ಬಂದು ಹೋಗಿ ಮಾಡುತ್ತಾನೆ. ಎರಡು ಜನ ಹೆಣ್ಣು ಮಕ್ಕಳ ಮದುವೆ ಆಗಿರುತ್ತದೆ. ಎರಡು ಜನ ಹೆಣ್ಣು ಮಕ್ಕಳ ವಿದ್ಯಾಭ್ಯಾಸ 3 ವರ್ಷಗಳ ಹಿಂದೆ ಮುಗಿದಿರುತ್ತದೆ. ಸಾಮಾನ್ಯವಾಗಿ ಕಾಲೇಜು ವರ್ಷವಿಡಿ ಹಾಗೂ ಶಾಲೆಗಳು 10 ತಿಂಗಳು ಇರುತ್ತವೆ ಅಂದರೆ ನಿಜ. ನನ್ನ ಎರಡು ಜನ ಮಕ್ಕಳು ಪದವಿ ವಿಧ್ಯಾಭ್ಯಾಸ ಮುಗಿಸಿದ್ದಾರೆ. ಮಕ್ಕಳ

ವಿದ್ಯಾಭ್ಯಾಸದ ಸಲುವಾಗಿ ಖಾಯಂ ಆಗಿ ಬೈರಿದೇವರಕೊಪ್ಪದಲ್ಲಿ ವಾಸವಾಗಿದ್ದೇವೆ. ಬೈರಿದೇವರಕೊಪ್ಪದ ಪಾಟೀಲ ಇವರ ಮನೆಯಲ್ಲಿ ಬಾಡಿಗೆಗೆ ವಾಸವಾಗಿದ್ದೇವೆ.

ನನ್ನ ಮಗನಿಗೆ 17 ವರ್ಷ ಮುಗಿದಿವೆ. ಪ್ರೀ ನರ್ಸರಿಯಿಂದ ಮಗ ಹುಬ್ಬಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ಮೊದಲು ಬೈರಿದೇವರಕೊಪ್ಪದ ಶಿವಾನಂದ ಶಾಲೆಗೆ ಹೋಗುತ್ತಿದ್ದ. 5 ವರ್ಷದ ಮಕ್ಕಳು ತಮ್ಮ ಕೆಲಸ ತಾವೇ ಮಾಡಿಕೊಳ್ಳಲು ಆಗುವುದಿಲ್ಲ. 5 ವರ್ಷದ ಮಕ್ಕಳ ವ್ಯವಸ್ಥೆಯನ್ನು ತಂದೆ ತಾಯಿ ಮಾಡಬೇಕಾಗುತ್ತದೆ ಅಂದರೆ ನಿಜ. ಈಗಿನ ಮಕ್ಕಳಿಗೆ ಒಂದು ಲೋಟಾ ನೀರು ಕೊಡಲು ಆಗುವುದಿಲ್ಲ ಅಂದರೆ ನಿಜ. ಸಣ್ಣ ಮಕ್ಕಳಿಗೆ ಬೇರೆ ಮಕ್ಕಳನ್ನು ಜೋಪಾನ ಮಾಡಲು ಆಗುವುದಿಲ್ಲ ಅಂದರೆ ನಿಜ. 5 ವರ್ಷದ ಮಕ್ಕಳಿಗೆ ತಮ್ಮ ಬಟ್ಟೆ ತಾವೇ ಹಾಕಿಕೊಳ್ಳಲು ಬರುವುದಿಲ್ಲ ಅಂದರೆ ನಿಜ. ಬಟ್ಟೆ ಹಾಕುವ ಕೆಲಸವನ್ನು ತಂದೆ ತಾಯಿ ಅಥವಾ ಹಿರಿಯರು ಮಾಡುತ್ತಾರೆ ಅಂದರೆ ನಿಜ. ಮಗನನ್ನು ಎರಡುವರೆ ವರ್ಷಗಳ ನಂತರ ಪ್ರೀ ನರ್ಸರಿ ಶಾಲೆಗೆ ಹಾಕಿರುತ್ತೇವೆ. ಅಲ್ಲಿಂದ ಇಲ್ಲಿಯವರೆಗೆ ಮಗ ಹುಬ್ಬಳ್ಳಿಯಲ್ಲಿ ಓದುತ್ತಿದ್ದಾನೆ ಅಂದರೆ ನಿಜ. ಆತ ಖಾಯಂ ಅಲ್ಲಿಯೇ ವಾಸವಾಗಿದ್ದಾನೆ ಅಂದರೆ ನಿಜ.

ವಯಸ್ಸಾದವರನ್ನು ಆರೈಕೆ ಮಾಡಲು ದೊಡ್ಡವರು ಬೇಕಾಗುತ್ತಾರೆ ಅಂದರೆ ನಿಜ. ಸಣ್ಣ ಮಕ್ಕಳು ವಯಸ್ಸಾದವರನ್ನು ನೋಡಿಕೊಳ್ಳಲು ಆಗುವುದಿಲ್ಲ. ವಯಸ್ಸಾದವರ ಮಾತನ್ನು ಈಗಿನ ಮಕ್ಕಳು ಕೇಳುವುದಿಲ್ಲ ಅಂದರೆ ನಿಜ. ನಾನು ಹಾಜರ ಪಡಿಸಿದ ಮೃತ್ಯು ಪತ್ರದಲ್ಲಿ ತಾನು ಇರುವವರೆಗೆ ತನ್ನ ಹೆಸರಿಲ್ಲಿ ತಾನು ಸತ್ತ ನಂತರ ಮೊಮ್ಮಗನಿಗೆ ಆಸ್ತಿ ಆಗಲಿ ಎಂದು ಮೃತ್ಯು ಪತ್ರದಲ್ಲಿ ಬರೆದಿರುತ್ತಾರೆ. ಅಂತ್ಯ ಸಮಯದಲ್ಲಿ ಯಾರು ಆರೈಕೆ ಮಾಡುತ್ತಾರೆ ಅವರ ಮೇಲೆ ಪ್ರೀತಿ, ವಿಶ್ವಾಸ ಇರುತ್ತದೆ ಅಂದರೆ ನಿಜ. ನಾವು ಆರೈಕೆ ಮಾಡಿದ್ದೇವೆ ಎಂದು ಮೃತ್ಯು ಪತ್ರದಲ್ಲಿ ಬರೆದಿರುತ್ತಾರೆ. ಮೃತ್ಯು ಪತ್ರದಲ್ಲಿ ಯಾರು ಜೋಪಾನ ಮಾಡಿದ್ದಾರೆ ಎನ್ನುವ ಬಗ್ಗೆ ನಮೂದಿಸಿಲ್ಲ.

ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಮೃತ್ಯು ಪತ್ರ ನಿಆರ್ -2 ನ್ನು ಯಾವ ದಿನಾಂಕದಂದು ನೋಂದಣಿ ಮಾಡಿದ್ದಾರೆ ಗೊತ್ತಿಲ್ಲ. ಮೃತ್ಯು ಪತ್ರವನ್ನು ತಹಶೀಲ್ದಾರ ಕಚೇರಿಯಲ್ಲಿ ಬರೆದಿರುತ್ತಾರೆ ಯಾರು ಬರೆದಿದ್ದಾರೆ ಗೊತ್ತಿಲ್ಲ. ನಮ್ಮ ಮಾವ ನಿಂಗಪ್ಪ ಅಶಿಕ್ಷಿತ ಅಂದರೆ ನಿಜ. ಯಾವುದೆ ದಾಖಲೆ ಬರೆಯುವಾಗ ದಾಖಲೆ ಬರೆದುಕೊಡುವವರು ಅಶಿಕ್ಷಿತರಾಗಿದ್ದರೆ ಬರೆದ ನಂತರ ಅದನ್ನು ಓದಿ ಹೇಳಬೇಕಾಗುತ್ತದೆ ಅಂದರೆ ನಿಜ. ಮೃತ್ಯು ಪತ್ರವನ್ನು ಕಂಪ್ಯೂಟರನಲ್ಲಿ ಬೆರಳಚ್ಚು ಮಾಡಿಸಿದ್ದಾರೆ. ಮೃತ್ಯು ಪತ್ರವನ್ನು ನಮ್ಮ ಮಾವ ಓದಿ ತಿಳಿಸಿದ ಹೇಳಿದ ನಂತರ ಅವರು ಸಹಿ ಮಾಡಿದ್ದಾರೆಂದು ದಾಖಲೆಯಲ್ಲಿ ನಮೂದಿಸಲಾಗಿದೆ. ಮೃತ್ಯು ಪತ್ರ ಬರೆಯುವ ಸಮಯದಲ್ಲಿ ನಾನು ಸಹ ಇದ್ದೇನು. ನನ್ನ ಗಂಡ ಸಹ ಬಂದಿದ್ದರು. ನಮ್ಮ ಮಾವನಿಗೆ ನಾವು ಹೇಳಿರಲಿಲ್ಲ. ನಾವು ಎಲ್ಲರೂ ಕೂಡಿಕೊಂಡು ಕಚೇರಿಗೆ ಹೋಗಿದ್ದೆವು. ನನ್ನ ಗಂಡ ಅಶಿಕ್ಷಿತ. ಆಸ್ತಿ ದಾಖಲೆಯನ್ನು ಕಚೇರಿಯಲ್ಲಿ ಪಡೆದುಕೊಂಡಿದ್ದೇವೆ. ಮಾಹಿತಿ ನಾವೇ ಹೇಳಿರುತ್ತೇವೆ. ದಾಖಲೆಗೆ ಹೆಬ್ಬೆಟ್ಟಿನ

ಗುರುತು ಹಾಕಿದಾಗ ಅದಕ್ಕೆ ದಸ್ತೂರ ಹಾಕುತ್ತಾರೆ ಅಂದರೆ ನಿಜ. ನಿಆರ್ -2 ರ ಮೇಲೆ ಇರುವ ಹೆಬ್ಬೆಟ್ಟಿನ ಗುರುತಿನ ಮೇಲೆ ದಸ್ತೂರ ಹಾಕಿಲ್ಲ ಅಂದರೆ ನಿಜ.

ಮಂಜುನಾಥ ರಾಮಜಿ ನಮ್ಮ ಊರಿನವರು. ಚನ್ನಬಸಪ್ಪ ನಾಗಪ್ಪ ಕುಸುಗಲ್ ಇವರು ಬೈರಿದೇವರಕೊಪ್ಪದವರು ಹಾಗೂ ನಮ್ಮ ಮನೆಯ ಪಕ್ಕದವರು. ಸದರಿಯವರನ್ನು ನಾವೆ ಕರೆದುಕೊಂಡು ಹೋಗಿದ್ದೆವು. ಮೃತ್ಯು ಪತ್ರದ ವಿಷಯವನ್ನು ಸಾಕ್ಷಿದಾರರಿಗೆ ನಾವೆ ಹೇಳಿದ್ದೆವು. ಸದರಿಯವರು ಬೇರೆ ಕೆಲಸದ ನಿಮಿತ್ಯ ಕಲಘಟಗಿಗೆ ಬಂದಿದ್ದು ನಾವು ಹೇಳಿದ್ದರಿಂದ ಮೃತ್ಯು ಪತ್ರಕ್ಕೆ ಸಹಿ ಮಾಡಿದ್ದಾರೆ. ಸಾಕ್ಷಿದಾರ ಚನ್ನಬಸಪ್ಪ ಇವರು ಯಾವ ವಿಷಯಕ್ಕೆ ಇಲ್ಲಿಗೆ ಬಂದಿದ್ದರು ನನಗೆ ಗೊತ್ತಿಲ್ಲ. ಮಂಜುನಾಥ ಹಾಗೂ ಚನ್ನಬಸಪ್ಪ ಇವರಿಗೆ ನಮ್ಮ ಮಾವ ನಿಂಗಪ್ಪನ ಪರಿಚಯ ಇರುವುದಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಮಂಜುನಾಥ ಇವರ ಪರಿಚಯ ಇದೆ ಎನ್ನುತ್ತಾರೆ. ಮೃತ್ಯು ಪತ್ರದಲ್ಲಿ ಯಾವ ಆಸ್ತಿ ಉಲ್ಲೇಖ ಮಾಡಿದ್ದಾರೆ ನನಗೆ ಗೊತ್ತಿಲ್ಲ. ಯಾವ ವಿಷಯಕ್ಕೆ ಮೃತ್ಯು ಪತ್ರ ಬರೆದಿದ್ದಾರೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ವಿಷಯ ಗೊತ್ತಿದೆ. ನನ್ನ ಪ್ರಮಾಣ ಪತ್ರದಲ್ಲಿ ಮೃತು ಪತ್ರದ ದಿನಾಂಕ 21.10.2022 ಎಂದು ನಮೂದಿಸಲಾಗಿದೆ ಅಂದರೆ ನಿಜ. ದಿನಾಂಕ 21.10.2022 ರ ಮೃತ್ಯು ಪತ್ರವನ್ನು ಹಾಜರ ಪಡಿಸಿಲ್ಲ.

ನಿಂಗಪ್ಪ ಕ್ಯಾನ್ಸರನಿಂದ ಮೃತಪಟ್ಟಿದ್ದಾರೆ. ಎಷ್ಟು ವರ್ಷಗಳ ಹಿಂದೆ ಕ್ಯಾನ್ಸರ ಆಗಿತ್ತು ಗೊತ್ತಿಲ್ಲ. ಸಿಗಿಗಟ್ಟಿ ಹಾಗೂ ಬಸನಕೊಪ್ಪ ಗ್ರಾಮ ಅಕ್ಕಪಕ್ಕದ ಹಳ್ಳಿಗಳು ಅಂದರೆ ನಿಜ. ಎರಡು ಗ್ರಾಮಗಳ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಿವೆ ಅಂದರೆ ನಿಜ. ಲಮಾಣಿಯವರ ಹೊಲ ನಿಂಗಪ್ಪನ ಹೊಲಕ್ಕೆ ಹೊಂದಿಕೊಂಡು ಇರುತ್ತವೆ ಅಂದರೆ ಸರಿಯಲ್ಲ. ನಿಂಗಪ್ಪ ಹಾಗೂ ಲಮಾಣಿ ಇವರು ಅನ್ಯೂನ್ಯತೆ ಇದ್ದರು ಅಂದರೆ ಸರಿಯಲ್ಲ. ನಿಂಗಪ್ಪನಿಗೆ ಮದುವೆ ಆಗಿರಲಿಲ್ಲ. ನಾನು, ನನ್ನ ಗಂಡ ಹಾಗೂ ಮಕ್ಕಳು ಬೈರಿದೇವರಕೊಪ್ಪದಲ್ಲಿ ವಾಸವಾಗಿರುವುದರಿಂದ ನನ್ನ ಮಾವ ನಿಂಗಪ್ಪನನ್ನು ಕಮಲಾಬಾಯಿ ಹಾಗೂ ಅವಳ ಗಂಡ ನೋಡಿಕೊಂಡಿದ್ದಾರೆ ಅಂದರೆ ಸರಿಯಲ್ಲ. ಕಮಲವ್ವನ ಹೆಸರಿನಲ್ಲಿ ಮೃತ್ಯು ಪತ್ರ ಇರುವುದನ್ನು ನಾನು ನೋಡಿಲ್ಲ. ಕಮಲವ್ವಳ ಬಗ್ಗೆ ನಮ್ಮ ವಕೀಲರನ್ನು ವಿಚಾರಿಸಿಲ್ಲ. ನಾನು ತಕರಾರು ಸಲ್ಲಿಸುವ ಮುಂಚೆ ನಮ್ಮ ವಕೀಲರನ್ನು ಕೇಳಿದ್ದರೆ ನಿಜವಾದ ವಿಷಯ ಗೊತ್ತಾಗುತ್ತಿತ್ತು ಅಂದರೆ ನಿಜ. ನಿಆರ್-1 ರಲ್ಲಿರುವ ಫೋಟೋ ತೋರಿಸಲಾಗಿ ಸಾಕ್ಷಿ ಅದನ್ನು ಗುರುತಿಸಿ ಅದರಲ್ಲಿರುವವರು ನಮ್ಮ ಮಾವ ಎಂದು ಗುರುತಿಸಿರುತ್ತಾರೆ. ನಿಆರ್-1 ಕ್ಕೆ ಹೆಬ್ಬೆಟ್ಟಿನ ಗುರುತು ಇರುತ್ತವೆ ಸದರಿ ಹೆಬ್ಬೆಟ್ಟಿನ ಗುರುತುಗಳನ್ನು ನಿಂಗಪ್ಪ ಹಾಕಿದ್ದಾನೆ ಅಂದರೆ ಸಾಕ್ಷಿ ಅವರೆ ಹಾಕಿದ್ದಾರೆ ಎನ್ನುವ ಬಗ್ಗೆ ಏನು ಇದೆ ಎನ್ನುತ್ತಾರೆ. ನಿಆರ್ -1 ದಿನಾಂಕ 21.10.2022 ರಂದು ನೋಂದಣಿ ಆಗಿದೆ ಅಂದರೆ ನಿಜ. ಮೃತು ಪತ್ರವನ್ನು ನಿಂಗಪ್ಪನ ಮಾಹಿತಿ ಮೇರೆಗೆ ವಕೀಲರು ತಯಾರಿಸಿದ್ದಾರೆ ಎನ್ನುವದು ನನಗೆ ಗೊತ್ತಿಲ್ಲ. ನಿಆರ್-1 ರ ಬಗ್ಗೆ ಈ ಮೊದಲೆ ತಿಳಿದುಕೊಂಡಿದ್ದರೆ ನಿಜವಾದ ವಿಷಯ ಗೊತ್ತಾಗುತ್ತಿತ್ತು ಅಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಅನ್ನುತ್ತಾರೆ. ನಿಂಗಪ್ಪ ಮೃತ ಪಟ್ಟ

ದಿನಾಂಕ ಗೊತ್ತಿಲ್ಲ. ನಿಂಗಪ್ಪನ ಮರಣ ಪತ್ರವನ್ನು ತೆಗೆಸಿದ್ದೇನೆ ಆದರೆ ದಿನಾಂಕ ನೆನಪಿಲ್ಲ. ನಿಂಗಪ್ಪನ ಅಂತ್ಯ ಕಾಲದಲ್ಲಿ ಕಮಲವ್ವ ಹಾಗೂ ಆಕೆಯ ಗಂಡ ಚನ್ನಾಗಿ ನೋಡಿಕೊಂಡಿದ್ದು ಅವರ ಮೇಲೆ ಪ್ರೀತಿ ವಿಶ್ವಾಸ ಇತ್ತು ಅಂದರೆ ಸರಿಯಲ್ಲ. ನಿಂಗಪ್ಪನ ಅಂತ್ಯ ಸಂಸ್ಕಾರವನ್ನು ಕಮಲವ್ವ ಹಾಗೂ ಅವಳ ಗಂಡ ಮಾಡಿದ್ದಾರೆ ಅಂದರೆ ಸರಿಯಲ್ಲ. ನಾವು ನಿಂಗಪ್ಪನ ಶವ ಸಂಸ್ಕಾರಕ್ಕೆ ಕೂಡಾ ಹೋಗಿರಲಿಲ್ಲ ಅಂದರೆ ಸರಿಯಲ್ಲ. ನಮ್ಮ ಮಾವನ ಶವ ಸಂಸ್ಕಾರ ಹಾಗೂ ಅದಕ್ಕೆ ಖರ್ಚು ನಾವೆ ಮಾಡಿದ್ದೇವೆ ಎಂದು ನಮ್ಮ ತಕರಾರಿನಲ್ಲಿ ಎಲ್ಲಿಯೂ ತಿಳಿಸಿಲ್ಲ.

3 ನೇ ಎದುರುದಾರ ನನ್ನ ಮೈದುನ. ಸದರಿ ಸಿದ್ದಪ್ಪ ನಮ್ಮ ಮಾವ ನಿಂಗಪ್ಪನ ಅಣ್ಣನ ಮಗ ಅಂದರೆ ನಿಜ. ಸಿದ್ದಪ್ಪ ಹಾಗೂ ನಮ್ಮ ಮಧ್ಯ ಒಳ್ಳೆಯ ಸಂಬಂಧ ಇಲ್ಲ. ಕಮಲವ್ವಳ ಪರವಾಗಿ ಯಾರು ಸಾಕ್ಷಿ ಹೇಳಿದ್ದಾರೆ ಗೊತ್ತಿಲ್ಲ. ಸಿದ್ದಪ್ಪ ಅರೆಬಸನಕೊಪ್ಪ ಗ್ರಾಮದಲ್ಲಿ ವಾಸವಾಗಿದ್ದು ಆತನ ಜೊತೆಗೆ ನಿಂಗಪ್ಪ ಇರುತ್ತಿದ್ದ ಅಂದರೆ ಸರಿಯಲ್ಲ. ಸುಮಾರು 15 ವರ್ಷಗಳಿಂದ ನಾವು ಬೈರಿದೇವರಕೊಪ್ಪಕ್ಕೆ ಹೋಗಿದ್ದೇವೆ. ನನ್ನ ಮತನಾದ ಬಸನಕೊಪ್ಪ ಗ್ರಾಮದಲ್ಲಿ ಇರುತ್ತದೆ. ನಿಂಗಪ್ಪ ನಮ್ಮ ಜೊತೆಗೆ ವಾಸವಾಗಿದ್ದ ಎನ್ನುವ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ. ಬಸನಕೊಪ್ಪ ಗ್ರಾಮದಲ್ಲಿ ಎರಡು ಮನೆಗಳು ಇರುತ್ತವೆ. ನಿಂಗಪ್ಪ ಹಾಗೂ ಮಹಾದೇವಪ್ಪ ಒಂದೆ ಮನೆಯಲ್ಲಿ ವಾಸವಾಗಿದ್ದರು ಅಂದರೆ ನಿಜ. ನಿಂಗಪ್ಪ ಹಾಗೂ ಹೊಳೆಪ್ಪನ ಮನೆಗಳು ಆಜುಬಾಜು ಇರುತ್ತವೆ. ಮಾದೇವಪ್ಪನ ಮನೆ ಪ್ಲಾಟನಲ್ಲಿ ಇರುತ್ತವೆ. ಈ ಪ್ರಕರಣದಲ್ಲಿ ಮಹಾದೇವಪ್ಪ ಸಾಕ್ಷಿ ನುಡಿದಿದ್ದಾನೆ ಎನ್ನುವದು ನನಗೆ ಗೊತ್ತಿಲ್ಲ. ಕಮಲವ್ವಳ ಪರವಾಗಿ ಎಷ್ಟು ಜನ ಸಾಕ್ಷಿ ನುಡಿದಿದ್ದಾರೆ ಗೊತ್ತಿಲ್ಲ. ನಿಂಗಪ್ಪ ನನ್ನ ಮಗನ ಪರವಾಗಿ ಬರೆದುಕೊಟ್ಟ ಮೃತ್ಯು ಪತ್ರವು 2 ನೇ ಮೃತ್ಯು ಪತ್ರ ಬರೆದುಕೊಡುವ ಮೂಲಕ ರದ್ದಾಗಿರುತ್ತದೆ ಅಂದರೆ ಸರಿಯಲ್ಲ. ನಾವು ನಿಂಗಪ್ಪನನ್ನು ಎಂದಿಗೂ ಜೋಪಾನ ಮಾಡಿಲ್ಲ ಆದರೆ ಆಸ್ತಿಯನ್ನು ಲಪಟಾಯಿಸಬೇಕು ಎನ್ನುವ ಉದ್ದೇಶದಿಂದ ಖೊಟ್ಟಿ ಮೃತ್ಯು ಪತ್ರವನ್ನು ಸೃಷ್ಟಿಸಿದ್ದೇವೆ ಅಂದರೆ ಸರಿಯಲ್ಲ. ನಿಆರ್ -2 ರ ಪ್ರಕಾರ ನಮಗೆ ಯಾವುದೆ ಹಕ್ಕು ಪ್ರಾಪ್ತ ಆಗುವುದಿಲ್ಲ, ನಮಗೆ ಯಾವುದೆ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ಖೊಟ್ಟಿ ಮೃತ್ಯು ಪತ್ರ ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**

ಎಫ್ ಡಿ ಪಿ **ನಂ. 9/2025**
ಆರ್ ಡಬ್ಲ್ಯು **: 05**